## <u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ</u>
## <u>ಸಿ.ಸಿ. ಸಂ.178/2019 P.W.-1.</u>

ಈ ದಿನ ದಿಃ12.10.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು</u> ಃ ಆರೋಪಿ ಪರ ವಕೀಲರಿಂದಃ-

ನನ್ನ ಬ್ಯಾಂಕ್ ಖಾತೆಯು ಎಸ್ ಬಿ ಐ, ತರೀಕೆರೆ ಶಾಖೆನಲ್ಲಿ ಇದೆ. 2018 ರಲ್ಲಿ ನಾನು ವ್ಯವಹಾರ ನಡೆಸಿರುವ ಬಗ್ಗೆ ಬ್ಯಾಂಕ್ ದಾಖಲೆ ಇದೆ. 2018 ರಲ್ಲಿ ನನ್ನ ಬ್ಯಾಂಕ್ ಖಾತೆಯಲ್ಲಿ 8 ಲಕ್ಷ ಹಣ ಇರಲಿಲ್ಲ ಎಂದರೆ ನಾನು ಬ್ಯಾಂಕ್‌ನ ವ್ಯವಹಾರ ಜಾಸ್ತಿ ಮಾಡುವುದಿಲ್ಲ ರೈತರ ಬಳಿ ಅಡಿಕೆ ಕೊಟ್ಟು ತೆಗೆದುಕೊಳ್ಳುವುದು ಮಾಡುತ್ತೇನೆ. 2018 ರಲ್ಲಿ ಅಥವಾ ಈಗಲೂ ಸಹಃ ನನಗೆ ಖಾಯಂ ಆಗಿ ಲಕ್ಷಂತಾರ ರೂಪಾಯಿ ಆದಾಯ ಬರುವಂತಹಃ ಯಾವುದೇ ಮೂಲ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ವ್ಯವಹಾರ ಮಾಡುತ್ತೇನೆ ಎಂದು ನುಡಿಯುತ್ತಾರೆ. 2018 ರಲ್ಲಿ ಅಥವಾ ಇಲ್ಲಿಯವರೆಗೂ ನಾನು ಆ ರೀತಿ ವ್ಯವಹಾರ ಮಾಡಿರುವ ಬಗ್ಗೆ ಯಾವುದೇ ಲಿಖಿತ ದಾಖಲೆ ನನ್ನ ಬಳಿ ಇಲ್ಲ. ಯಾವುದೇ ವ್ಯಕ್ತಿ ಹಣವನ್ನು ನೀಡಬೇಕಾದರೆ ಅದನ್ನು ಹಿಂದಿರುಗಿಸುವಂತಹಃ ಶಕ್ತಿ ಇರುವಂತಹಃ ವ್ಯಕ್ತಿಗೆ ನೀಡುತ್ತಾರೆ ಎಂದರೆ ಸರಿ. ಆರೋಪಿ ಮತ್ತು ಆಕೆಯ ಗಂಡ ಇಬ್ಬರು ಹಂದಿ ವ್ಯವಹಾರ ಮಾಡುತ್ತಿದ್ದರು. ಆ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ.

ನನ್ನ ಹೆಂಡತಿ ಪುರಸಭೆಯ ಸದಸ್ಯರಾಗಿದ್ದಾಗ ಆರೋಪಿಯು ಪುರಸಭೆಯ ಅಧ್ಯಕ್ಷರಾಗಿದ್ದು ಮುಂದೆ ಅಧ್ಯಕ್ಷರಾಗುವವರಿಗೆ ಚೆಕ್ ಅನ್ನು ನೀಡುವ ರೂಡಿ ಇದ್ದು ಆ ರೀತಿ ಆರೋಪಿಯಿಂದ ಅಧ್ಯಕ್ಷ ಹುದ್ದೆಯನ್ನು ನನ್ನ ಹೆಂಡತಿಗೆ ಬಿಟ್ಟುಕೊಡಲು ಆರೋಪಿಯು 2 ಖಾಲಿ ಚೆಕ್ ಗಳನ್ನು ನನ್ನ ಹೆಂಡತಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿಯು 2 ತಿಂಗಳ ಕಾಲ ಮಾತ್ರ ಅಧ್ಯಕ್ಷರಾಗಿದ್ದು ನನ್ನ ಪತ್ನಿಗೆ ಅಧ್ಯಕ್ಷರಾಗುವ

ಅವಕಾಶ ಸಿಗಲಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆದ ಕಾರಣ ನನ್ನ ಹೆಂಡತಿಗೆ ಅಧ್ಯಕ್ಷ ಹುದ್ದೆಯನ್ನು ಬಿಟ್ಟುಕೊಡಲಿಲ್ಲ ಎಂದು ಆರೋಪಿಯು ನೀಡಿದ್ದ ಚೆಕ್ ಅನ್ನು ದುರ್ಬಳಕೆ ಮಾಡಿ ನಾನು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಆರೋಪಿಗೆ ರೂ.8 ಲಕ್ಷ ಹಣ ಕೊಟ್ಟ ಬಗ್ಗೆ ಯಾರೊಂದಿಗೂ ಹೇಳಿಕೊಂಡಿರುವುದಿಲ್ಲ. ಹಣ ನೀಡುವಾಗ ನಾನು ಯಾವುದೇ ವ್ಯಕ್ತಿಯ ಸಮಕ್ಷಮ ಹಣವನ್ನು ನೀಡಿರುವುದಿಲ್ಲ. ನನಗೆ ಆ ದಿನ ರೂ.8 ಲಕ್ಷ ಹಣವನ್ನು ನಿರ್ದಿಷ್ಟವಾಗಿ ಯಾರಿಂದ ಪಡೆದು ಆರೋಪಿಗೆ ಕೊಟ್ಟಿರುತ್ತೇನೆ ಎಂದು ಹೇಳಲಾಗುವುದಿಲ್ಲ. ನನಗೆ 2018 ರಲ್ಲಿ ವಾರ್ಷಿಕ ಆದಾಯ ಎಷ್ಟು ಇತ್ತು ಎಂದರೆ ನಾನು ವ್ಯವಹಾರ ಮಾಡುತ್ತಿರುತ್ತೇನೆ ನನಗೆ ವಾರ್ಷಿಕ ಆದಾಯವನ್ನು ಹೇಳಲು ಬರುವುದಿಲ್ಲ. 2018 ರಲ್ಲಿ ನಾನು ಯಾವುದೇ ಆದಾಯ ತೆರಿಗೆ ಪಾವತಿ ಮಾಡಿಲ್ಲ. 2018 ರಲ್ಲಿ ನನಗೆ ನನ್ನ ಜೀವನ ನಿರ್ವಹಣೆ ಮಾಡುವಷ್ಟು ಸಹಃ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

ಆರೋಪಿ ಕೊಟ್ಟಿರುವ ಖಾಲಿ ಚೆಕ್‌ಗಳನ್ನು ನಾನು ದರ್ಬಳಕೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್‌ಗಳು ಹಣಕಾಸಿನ ವ್ಯವಹಾರಕ್ಕಾಗಿ ಕೊಟ್ಟ ಚೆಕ್ಕುಗಳು ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಓ.,

Sd/xxx

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.